# ಸಂತ ಜೋನರ ಸಂಯುಕ್ತ ಪ.ಪೂ. ಕಾಲೇಜು, ಶಂಕರಪುರ .

ಸೈಂಟ್ ಜೋನ್ಸ್ ಚರ್ಚಿನ ಧರ್ಮಗುರುಗಳಾಗಿ ಸೇವೆ ಸಲ್ಲಿಸಿದ ವಂದನೀಯ ಧರ್ಮಗುರು ಅಲೆಕ್ಸಾಂಡರ್ ಲೋಬೋ ರವರ ದೂರದರ್ಶಿತ್ವದ ಫಲವಾಗಿ ಜೂನ್ 2006 ರಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆಗೊಂಡಿತು. ಶಂಕರಪುರದ ಆಸುಪಾಸಿನ ಮಕ್ಕಳು ಹಣಕಾಸಿನ ಕೊರತೆಯಿಂದ ವಿದ್ಯಾಭ್ಯಾಸದಿಂದ ವಂಚಿತರಾಗದಂತೆ ಹಾಗೂ ವಿದ್ಯಾಭಾಸಕ್ಕಾಗಿ ಬೇರೆ ಕಡೆಗೆ ಸಂಚರಿಸಲು ಅನಾನುಕೂಲವಾಗಿ ವಿದ್ಯಾಭಾಸ ಮೊಟಕುಗೊಳಿಸದಂತೆ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಶಿಕ್ಷಣ ಸಂಸ್ಥೆಯ ಪ್ರಥಮ ಸಂಚಾಲಕರಾಗಿ ವಂ. ಗುರುಗಳಾದ ಅಲೆಕ್ಸಾಂಡರ್ ಲೋಬೋ ರವರು ಒಂದು ವರ್ಷಗಳ ಕಾಲ ಮಾರ್ಗದರ್ಶನವನ್ನು ನೀಡಿದರು. 2007 ರಿಂದ 2010 ರ ತನಕ ವಂ ಗುರುಗಳಾದ  ಹೆರಾಲ್ಡ್ ಡಿಸೋಜ, 2010 ರಿಂದ 2016 ರ ತನಕ ವಂ. ಗುರುಗಳಾದ ಡಾ. ಲೆಸ್ಲಿ ಡಿಸೋಜ, 2016 ರಿಂದ 2023 ರ ವರೆಗೆ ವಂ. ಗುರುಗಳಾದ ಫರ್ಡಿನಂಡ್ ಗೊನ್ಸಾಲ್ವಿಸ್ ಇವರು ಸಂಚಾಲಕರಾಗಿ ಮಾರ್ಗದರ್ಶನ ನೀಡಿದ್ದಾರೆ.

ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿ ಶ್ರೀಮತಿ ಒಕ್ಟೇವಿಯಾ ಫಿಲೋಮಿನಾ ಮಿನೇಜಸ್ ಇವರು ಎರಡು ವರ್ಷಗಳ ಕಾಲ ( 2006 – 2008) ಕಾಲೇಜನ್ನು ಉತ್ತಮ ರೀತಿಯಲ್ಲಿ ರೂಪಿಸಿದರು. ಈ ಸಮಯದಲ್ಲಿ ಶಿರ್ವ ಸಂತಮೇರಿ ಕಾಲೇಜಿನ ಉಪನ್ಯಾಸಕರಾದ ಶ್ರೀ ನಾಗರಾಜ್ ರಾವ್ (ರಸಾಯನಶಾಸ್ತ್ರ) ಹಾಗೂ ಡೆಸ್ಮಂಡ್ ಡಿಮೆಲ್ಲೊ (ಭೌತಶಾಸ್ತ್ರ) ಪ್ರಾಯೋಗಿಕ ತರಗತಿಗಳನ್ನು ನಡೆಸಿಕೊಟ್ಟು ಉತ್ತಮ ರೀತಿಯಲ್ಲಿ ನಮಗೆ ಸಹಕರಿಸಿದ್ದು ಚಿರಸ್ಮರಣೀಯ.

ಪ್ರಥಮ ಪಿ.ಯು.ಸಿ. ಯು ವಿಜ್ಞಾನ, ವಾಣಿಜ್ಯ, ಕಲಾ ವಿಭಾಗದಲ್ಲಿ 33 ಹುಡುಗರು, 37 ಹುಡುಗಿಯರು ಇದ್ದು ಪ್ರಾರಂಭಗೊಂಡಿತು. ಆ ವರ್ಷ ಒಳ್ಳೆಯ ಫಲಿತಾಂಶ ಬಂದಿದ್ದು ವಾಣಿಜ್ಯ – 100%, ವಿಜ್ಞಾನ – 74% ಹಾಗೂ ಕಲಾ – 92% ಆಗಿದ್ದು ಕಾಲೇಜಿನ ಒಟ್ಟು ಫಲಿತಾಂಶವು 89.06% ಆಗಿತ್ತು.

2008 ರಲ್ಲಿ ವಂ. ಗುರುಗಳಾದ ವಿಶಾಲ್ ಲೋಬೋರವರು ಪ್ರಾಂಶುಪಾಲರಾಗಿ ಮುಂದಿನ 3 ವರ್ಷಗಳ ವರೆಗೆ ಕಾಲೇಜನ್ನು ನಡೆಸಿದರು. 10 ಉಪನ್ಯಾಸಕರು, 3 ಸಹ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿ ಉತ್ತಮ ಫಲಿತಾಂಶ ಗಳಿಸುವಲ್ಲಿ ಶ್ರಮಿಸಿದರು. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾಯಿತು.  2010 ರಲ್ಲಿ ವಂ. ಗುರುಗಳಾದ ಡಾ. ಲೆಸ್ಲಿ ಡಿಸೋಜರವರು ಸಂಚಾಲಕರಾಗಿ ಆಗಮಿಸಿದರು. 2011 ರಲ್ಲಿ ವಂ. ಗುರು ವಿನ್ಸೆಂಟ್ ಕುವೆಲ್ಲೊ ರವರು ಪ್ರಾಂಶುಪಾಲರಾಗಿ 8 ವರ್ಷಗಳ ಕಾಲ ಕಾಲೇಜನ್ನು ಮುನ್ನಡೆಸಿದರು. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡು ಬಂದಿತು. ಅಂತೆಯೇ ಕಾಲೇಜಿನ ಫಲಿತಾಂಶದ ಏರಿಕೆಗೆ ಶ್ರಮಿಸಿದರು.

11-01-2013 ರಂದು ವಂ. ಗುರುಗಳಾದ ಡಾ. ಲೆಸ್ಲಿ ಡಿಸೋಜರವರ ಮುಂದಾಳತ್ವದಲ್ಲಿ ಪಿಯುಸಿ ವಿಭಾಗದ ನೂತನ ಕಟ್ಟಡ ಉದ್ಘಾಟನೆಗೊಂಡಿತು. ವ್ಯವಸ್ಥಿತವಾದ ಪ್ರಯೋಗಾಲಯಗಳು ಸಿದ್ಧಗೊಂಡವು. ನಮ್ಮ ವಿದ್ಯಾರ್ಥಿಗಳು ಹಲವಾರು ಕ್ರೀಡಾಕೂಟಗಳಲ್ಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

2019 ರಲ್ಲಿ ಶ್ರೀಮತಿ ಪ್ರಿಯಾ ಕೆ ಡೆ'ಸಾರವರು ಪ್ರಾಂಶುಪಾಲರಾಗಿ ಇಂದಿನವರೆಗೂ ಕಾಲೇಜನ್ನು ಮುನ್ನಡೆಸಿಕೊಂಡು ಬಂದಿರುತ್ತಾರೆ.

2022 – 2023 ನೇ ಶೈಕ್ಷಣಿಕ ವರ್ಷದಿಂದ ವಂ. ಧರ್ಮಗುರು ವಿಜಯ್ ಡಿಸೋಜರವರು ಸಂಯೋಜಕರಾಗಿ ಕಾಲೇಜು ಉತ್ತಮ ಗುಣಮಟ್ಟವನ್ನು ಹೊಂದಲು ಪರಿಶ್ರಮಿಸುತ್ತಿದ್ದಾರೆ.

S.S.L.C. ಯಲ್ಲಿ 90% ಹಾಗೂ ಅದಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಅವರ ಶಾಲಾ ಶುಲ್ಕಕ್ಕೆ sponcership ನ್ನು ದಾನಿಗಳಿಂದ ಪಡೆದು ಭರಿಸಲಾಗುತ್ತಿದೆ. ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಣ ಪಡೆಯುವಲ್ಲಿ ನೆರವಾಗಿದ್ದು, ಪ್ರತಿ ವರ್ಷ 1,50,000/- ದಿಂದ 2,00,000/- ತನಕದ ಮೊತ್ತವನ್ನು ಕಾಲೇಜು

ಶುಲ್ಕದಲ್ಲಿರಿಯಾಯಿತಿ ರೂಪದಲ್ಲಿ ಕೊಡುತ್ತಾ ಬಂದಿರುತ್ತೇವೆ. ಈ ನಿಟ್ಟಿನಲ್ಲಿ ಊರ ಹಿರಿಯ ವ್ಯಕ್ತಿಗಳು, ನಿವೃತ್ತ ಶಿಕ್ಷಕರು, ದಾನಿಗಳು ಹಾಗೂ SVP ಸಂಘವೂ ಬಲು ದೊಡ್ಡ ಸಹಕಾರವನ್ನು ನೀಡುತ್ತಾ ಬಂದಿದೆ. ಸಂತ ಜೋನರ ಪದವಿ ಪೂರ್ವ ಕಾಲೇಜು ಪ್ರಿಯಾ ಕೆ. ಡೆ'ಸಾರವರ ಮುಂದಾಳತ್ವದಲ್ಲಿ ಹಾಗೂ ವಂ. ಧರ್ಮಗುರು ಡಾ. ಪ್ರಕಾಶ್ ಅನಿಲ್ ಕಸ್ತಲಿನೊ ಇವರ ಸಂಚಾಲಕತ್ವದಲ್ಲಿ ಉತ್ತಮಗುಣಮಟ್ಟದ ಶಿಕ್ಷಣ ನೀಡಲು ಪರಿಶ್ರಮಿಸುತ್ತಿದೆ.